ಕರ್ನಾಟಕ ಸರ್ಕಾರ

# ಸೋಲದೇವನಹಳ್ಳಿ ಗ್ರಾಮ ಪಂಚಾಯಿತಿ ಕಾರ್ಯಾಲಯ

ಸೋಲದೇವನಹಳ್ಳಿ, ಕಸಬಾ ಹೋಬಳಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.

ಸಂಖ್ಯೆ : ಸೋ.ಗ್ರಾ.ಪಂ. 72/2022-23 ದಿನಾಂಕ.02-02-2023

ಇವರಿಗೆ,

**ಜಂಟಿ ನಿರ್ದೇಶಕರು**

ಹಾಗೂ ಸದಸ್ಯ – ಕಾರ್ಯದರ್ಶಿ,
ನೆಲಮಂಗಲ ಯೋಜನಾ ಪ್ರಾಧಿಕಾರ,
ನೆಲಮಂಗಲ.

ಮಾನ್ಯರೆ,

ನೆಲಮಂಗಲ ಯೋಜನಾ ಪ್ರಾಧಿಕಾರ ಸಂಖ್ಯೆ ದಿನಾಂಕ ನೆಲಮಂಗಲ

**ವಿಷಯ: ನೆಲಮಂಗಲ ತಾಲ್ಲೂಕು, ಕಸಬಾ ಹೋಬಳಿ, ಮಂಟನಕುರ್ಚಿ ಗ್ರಾಮದ ಸರ್ವೆ ನಂ. 153/3, 155/2, 163, 164/2, 164/3, ಹಾಗೂ 164/6 ರಲ್ಲಿ 22ಎಕರೆ 19 ಗುಂಟೆ ವಿಸ್ತೀರ್ಣ ಪ್ರದೇಶಕ್ಕೆ ಪ್ರಾಧಿಕಾರದಿಂದ ವಸತಿ ವನ್ಯಾಸ ಅನುಮೋದನೆ ನೀಡಲು ಹಾಗೂ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಬಗ್ಗೆ.**

*********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ನೆಲಮಂಗಲ ತಾಲ್ಲೂಕು, ಕಸಬಾ ಹೋಬಳಿ, ಮಂಟನಕುರ್ಚಿ ಗ್ರಾಮದ ಸರ್ವೆ ನಂ. 153/3, 155/2, 163, 164/2, 164/3, ಹಾಗೂ 164/6 ರಲ್ಲಿ 22ಎಕರೆ 19 ಗುಂಟೆ ವಿಸ್ತೀರ್ಣ ಪ್ರದೇಶಕ್ಕೆ ಪ್ರಾಧಿಕಾರದಿಂದ ವಸತಿ ವನ್ಯಾಸ ಅನುಮೋದನೆ ನೀಡಲು ಹಾಗೂ ಮೂಲಭೂತ ಸೌಕರ್ಯಗಳನ್ನು ಒದಗಿಸುವುದಕ್ಕೆ ಸಂಬಂಧಿಸಿದಂತೆ, ಸದರಿ ಸರ್ವೆ ನಂಬರುಗಳಿಗೆ ಮಂಟನಕುರ್ಚಿ ಮುಖ್ಯರಸ್ತೆಯಿಂದ ಸರ್ವೆ ನಂ.153/2 ಹಾಗೂ ಸರ್ವೆ ನಂ. 153/4 ರಲ್ಲಿ 40 ಅಡಿ ಅಗಲದ ಜಮೀನನ್ನು ಸಾರ್ವಜನಿಕ ರಸ್ತೆ ಉದ್ದೇಶಕ್ಕಾಗಿ ಭೂ ಮಾಲೀಕರು ನಮ್ಮ ಪಂಚಾಯಿತಿಗೆ ಮುಕ್ತಟೆಯಾಗಿ ನೋದಾಯಿತ ಪರಿತ್ಯಾಜನಾ ಪತ್ರದ ಮೂಲಕ ಹಸ್ತಾಂತರಿಸಿದ್ದು, ಸದರಿ ರಸ್ತೆಯು ಸಾರ್ವಜನಿಕ ಸಂಪರ್ಕ ರಸ್ತೆಯಾಗಿರುತ್ತದೆ ಎಂದು ಈ ಮೂಲಕ ದೃಢೀಕರಿಸಿ, ಸದರಿ ಸರ್ವೆ ನಂಬರುಳಿಗೆ ತಮ್ಮ ಪ್ರಾಧಿಕಾರದಿಂದ ವಸತಿ ವಿನ್ಯಾಸಕ್ಕೆ ಅನುಮೋದನೆ ಪಡೆದ ನಂತರ, ಅರ್ಜಿದಾರರಿಂದ ನಿಯಮಾನುಸಾರ ಶುಲ್ಕಗಳನ್ನು ಪಾವತಿಸಿಕೊಂಡು, ಸದರಿ ಪ್ರದೇಶಕ್ಕೆ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗುವುದೆಂದು ಹಾಗೂ ಸದರಿ ಪ್ರದೇಶದಲ್ಲಿ ವಸತಿ ವಿನ್ಯಾಸಕ್ಕೆ ಅನುಮೋದನೆ ನೀಡಲು ನಮ್ಮ ಗ್ರಾಮ ಪಂಚಾಯಿತಿಯಿಂದ ಯಾವುದೇ ಆಕ್ಷೇಪಣೆ ಇರುವುದಿಲ್ಲ ಎಂದು ಈ ಮೂಲಕ ದೃಢೀಕರಣ ಪತ್ರ ನೀಡಲಾಗಿದೆ.

ವಂದನೆಗಳೊಂದಿಗೆ,

ಇಂತಿ ತಮ್ಮ ವಿಶ್ವಾಸಿ,

2/2/23

ಪಂಚಾಯಿತಿ ಅಭಿವೃದ್ಧಿ ಅಧಿಕಾರಿ
ಸೋಲದೇವನಹಳ್ಳಿ ಗ್ರಾಮ ಪಂಚಾಯ್ತಿ
ನೆಲಮಂಗಲ ತಾಲ್ಲೂಕು